ಸುದ್ದಿ ಸಿಂಚನ

ಇಂದು, ನಾಳೆ ಕುಡಿಯುವ ನೀರು ಸರಬರಾಜು ಸ್ಥಗಿತ


ಉಮೇಶ ಚವ್ಹಾಣ

ಯಾದಗಿರಿ: ನೀರು ಶುದ್ಧೀಕರಣ ಘಟಕದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆ, ಬುಧವಾರ, ಗುರುವಾರ ಕುಡಿವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪೌರಾಯುಕ್ತ ಉಮೇಶ ಚವ್ಹಾಣ ತಿಳಿಸಿದ್ದಾರೆ. ನೀರು ಶುದ್ಧೀಕರಣ ಘಟಕದಲ್ಲಿರುವ ಮೋಟಾರ್‌ನ ಫುಟ್ ಬಾಲ್ (Foot valve) ದುರಸ್ತಿಯಲ್ಲಿದ್ದು, ಅದನ್ನು ಸರಿಪಡಿಸುವುದು ಅಗತ್ಯ. ನಗರದ ಸಾರ್ವಜನಿಕರು ಲಭ್ಯವಿರುವ ನೀರನ್ನು ಮಿತವಾಗಿ ಬಳಸಬೇಕು. ನಗರಸಭೆಯ ಈ ತಾಂತ್ರಿಕ ಅನಿವಾರ್ಯತೆಗೆ ಸಾರ್ವಜನಿಕರು ಸಹಕರಿಸಬೇಕೆಂದು ಪೌರಾಯುಕ್ತರು ಕೋರಿದ್ದಾರೆ.

ನೇರ ಸಂದರ್ಶನಕ್ಕೆ ಆಹ್ವಾನ

ಯಾದಗಿರಿ: ಶಹಾಪೂರ ನಗರ ಪ್ರದೇಶದ ಆಯುಷ್ಮತಿ ಕ್ಲಿನಿಕ್, ಕಾರ್ನರ್‌ಗೆ ವಿವಿಧ ತಜ್ಞ ವೈದ್ಯರ ಸೇವೆ ಪಡೆಯಲು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಮಹೇಶ ಬಿರಾದರ್ ತಿಳಿಸಿದ್ದಾರೆ. ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ, ಶಹಾಪೂರ ನಗರ ಪ್ರದೇಶದ ಆಯುಷ್ಮತಿ ಕ್ಲಿನಿಕ್, ಕಾರ್ನರ್‌ಗೆ ವಿವಿಧ ತಜ್ಞ ವೈದ್ಯರ ಸೇವೆಗಳಿಗೆ ನಿಗದಿ ಪಡಿಸಿದ ಪ್ರೋತ್ಸಾಹಧನದ ಆಧಾರದ ಮೇಲೆ ವಿವಿಧ ತಜ್ಞ ವೈದ್ಯರ ಸೇವೆ ಪಡೆಯಲು ಪ್ರತಿ ಮಂಗಳವಾರರಂದು ಕಚೇರಿ ಸಮಯದಲ್ಲಿ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯದಲ್ಲಿ ನೇರ ಸಂದರ್ಶನಕ್ಕೆ ಆಹ್ವಾನಿಸಿದೆ. ಮಾಹಿತಿಗಾಗಿ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳು ದೂ.ಸಂ.9448012732ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ವಂಚಕನ ಬಂಧನ: ರೈತರಿಗೆ 71 ಲಕ್ಷ ವಿತರಣೆ

ಭತ್ತ ಖರೀದಿಸಿದ ವ್ಯಕ್ತಿಯಿಂದ 71 ಲಕ್ಷ ಹಣ ಜಪ್ತಿ | ಮಾಜಿ ಸಚಿವ ರಾಜೂಗೌಡ ನೇತೃತ್ವದಲ್ಲಿ ರೈತರಿಗೆ ಹಣ ವಿತರಣೆ

• **ಕನ್ನಡಪ್ರಭ ವಾರ್ತೆ** ಯಾದಗಿರಿ

ಬೆಳೆಗಾರರ ಭತ್ತದ ಬೆಳೆಯನ್ನು ಒಳ್ಳೆಯ ದರಕ್ಕೆ ಮಾರಾಟ ಮಾಡುವುದಾಗಿ ಹೇಳಿ, ಜಿಲ್ಲೆಯ ಸುರಪುರ ಭಾಗದ ರೈತರಿಂದ ₹1.49 ಕೋಟಿ ಮೌಲ್ಯದ ಭತ್ತದ ಬೆಳೆ ಪಡೆದು, ನಾಪತ್ತೆಯಾಗಿದ್ದ ಆಂಧ್ರಮೂಲದ ವ್ಯಕ್ತಿಯೊಬ್ಬನನ್ನು ಬಂಧಿಸಿ, ಆತನಿಂದ 71 ಲಕ್ಷ ರು. ಜಪ್ತಿ ಮಾಡಿ, ಮಾಜಿ ಸಚಿವ ನರಸಿಂಹ ನಾಯಕ್ (ರಾಜೂಗೌಡ) ನೇತೃತ್ವದಲ್ಲಿ ನೊಂದ ರೈತರಿಗೆ ಮರಳಿಸಿದ ಅಪರೂಪದ ನಡೆದಿದೆ.

ಕಳೆದ ಅಕ್ಟೋಬರ್ - ನವೆಂಬರ್‌ತಿಂಗಳಲ್ಲಿ ಸುರಪುರ ತಾಲೂಕಿನ ಬೈಚಬಾಳ-ಕೂಡಲಗಿ ಹಾಗೂ ಕರಡಕಲ್ ಗ್ರಾಮದ 43 ರೈತರು ₹1.49 ಕೋಟಿ ಮೌಲ್ಯದ ಭತ್ತವನ್ನು ಆಂಧ್ರ ಮೂಲದ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿದ್ದರು. ಆಂಧ್ರದಲ್ಲಿ ಒಳ್ಳೆಯ ಬೆಲೆ ನೀಡುವುದಾಗಿ ಹೇಳಿದ್ದ ಮಾಲು ಪಡೆದಿದ್ದ ಆ ವ್ಯಕ್ತಿ, ತಿಂಗಳುಗಳ ಕಾಲ ನಾಪತ್ತೆಯಾಗಿದ್ದ.

ಇನ್ನೇನು ಮಾರಿದ ಭತ್ತದ ಬೆಳೆಗೆ ಕೈತುಂಬಾ ಹಣ ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ರೈತರು, ಮಾಲು ಸಮೇತ ನಾಪತ್ತೆಯಾಗಿದ್ದ ಮಧ್ಯವರ್ತಿಯ ಪತ್ತೆಗಾಗಿ ಅಲೆದಾಡಿದ್ದರೂ ಸಿಕ್ಕಿರಲಿಲ್ಲ. ಕಂಗಾಲಾದ ರೈತರು ಸುರಪುರ ಮಾಜಿ ಶಾಸಕ ನರಸಿಂಹನಾಯಕ (ರಾಜೂಗೌಡ) ನೇತೃತ್ವದಲ್ಲಿ ಕೆಂಭಾವಿ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದರು. ನಂತರ ಕಾರ್ಯಪ್ರವೃತ್ತರಾದ ಕೆಂಭಾವಿ ಪೊಲೀಸ್ ಠಾಣೆಯ ಅಧಿಕಾರಿಗಳು ವ್ಯಕ್ತಿಯನ್ನು ಬಂಧಿಸಿ ಕರೆತಂದಿದ್ದರು. ಭತ್ತ ಖರೀದಿಸಿ ರೈತರಿಗೆ ಮೋಸ ಮಾಡಿ 5-6 ತಿಂಗಳುಗಳಿಂದ ತಲೆಮರೆಸಿಕೊಂಡಿದ್ದ ದಲ್ಲಾಳಿ ಯಿಂದ ಸುಮಾರು ₹71 ಲಕ್ಷ ಹಣವನ್ನು 43 ಜನ ನೊಂದ ರೈತರಿಗೆ ನೀಡಲಾಯಿತು.

ಈ ಕಾರ್ಯದಲ್ಲಿ ಮಾಜಿ ಸಚಿವ ರಾಜೂಗೌಡರು ಸಹಕಾರ ಸ್ಮರಣೀಯ ಎಂದು ಕೃತಜ್ಞತಾಭಾವ ವ್ಯಕ್ತಪಡಿಸಿದ ನೊಂದ ರೈತರು, ಅವರನ್ನು ಸನ್ಮಾನಿಸಿದರು. ಬೈಚಬಾಳ ಗ್ರಾಮಕ್ಕೆ ತೆರಳಿ ಆರಾಧ್ಯದೈವ ಶ್ರೀ ಬಲಭೀಮೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ದೇವರ ಸನ್ನಿಧಾನದಲ್ಲೇ ಸ್ವತಃ ರಾಜೂಗೌಡರು ನೊಂದ ರೈತರಿಗೆ ಹಣವನ್ನು ಎಣಿಸಿ ರೈತರಿಗೆ ವಿತರಿಸಿದರು.

ಈ ವಿಚಾರದಲ್ಲಿ ತಮಗೆ ಸಹಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ದರ್ಶನಾಪುರ ಅವರಿಗೆ ರಾಜೂಗೌಡರು ಧನ್ಯವಾದ ಅರ್ಪಿಸಿದರು.

ಈ ಸಂದರ್ಭದಲ್ಲಿ ಯಲ್ಲಪ್ಪ ಕುರಕುಂದಿ, ಕೃಷ್ಣಾರೆಡ್ಡಿ ಮುದನೂರ, ಪ್ರವೀಣ ನಾಯಕ್ ಡೊಣ್ಣಿಗೆರೆ, ಅಂಬ್ರೇಶ್ ನಾಯಕ ಡೊಣ್ಣಿಗೆರೆ, ಶಂಕರಗೌಡಸಾದ್ಯಾಪುರ, ನಿಂಗಣ್ಣಗೋಡಿಹಾಳ್ಕರ್, ಮಡಿವಾಳಪ್ಪ ಕೊಂಡಗುಳಿ, ಬಸವರಾಜ ನಾಯಕ ಕನ್ನೆಳ್ಳಿ, ಭೀಮನಗೌಡ ಪೊಲೀಸ್ ಪಾಟೀಲ, ಮಲ್ಲು ಚಾನಕೋಟಿ, ವೆಂಕನಗೌಡ ಪೊಲೀಸ್ ಪಾಟೀಲ್, ಶರಣಗೌಡ ಪಾಟೀಲ, ಭೀಮಣ್ಣಶೆಟ್ಟಿ, ಯಂಕೋಬಗೌಡ ಬಿರಾದರ, ಪರಮಣ್ಣ ಯನಗುಂಟಿ, ಶಾಂತಪ್ಪ ಐಕೂರ್, ಮಲ್ಲನಗೌಡ ಬಿರಾದಾರ, ಯಂಕೋಬ ದೊರೆ, ಭೀಮಣ್ಣ ದೊರೆ, ನಿಂಗಪ್ಪ ಬಿಂಗಿ ಇದ್ದರು.


ಸುರಪುರ ರೈತರಿಂದ ₹1.49 ಕೋಟಿ ಮೌಲ್ಯದ ಭತ್ತದ ಬೆಳೆ ಪಡೆದು, ನಾಪತ್ತೆಯಾಗಿದ್ದ ವ್ಯಕ್ತಿಯನ್ನು ಬಂಧಿಸಿ, ಮಾಜಿ ಸಚಿವ ನರಸಿಂಹ ನಾಯಕ್ ನೇತೃತ್ವದಲ್ಲಿ ನೊಂದ ರೈತರಿಗೆ ಮರಳಿಸಲಾಯಿತು.


ಭತ್ತದ ಹಣ ಮರಳಿಸಿದ ಮಾಜಿ ಸಚಿವ ನರಸಿಂಹ ನಾಯಕ್‌ರಾಜೂಗೌಡರನ್ನು ರೈತರು ಸನ್ಮಾನಿಸಿದರು.

ಪಕ್ಷಭೇಧ ಮರೆತು ಮಾಜಿ ಶಾಸಕ ರಾಜೂಗೌಡರು ತಮ್ಮ ಪ್ರಾಮಾಣಿಕ ಪ್ರಯತ್ನದಿಂದ ನಮಗೆ ಹಣ ತಲುಪಿಸಿ ನ್ಯಾಯ ಕೊಡಿಸುವಲ್ಲಿ ನೆರವಾಗಿದ್ದಾರೆ ನಮ್ಮ ಗ್ರಾಮದ ಎಲ್ಲಾ ರೈತರು ರಾಜೂಗೌಡರಿಗೆ ಅಭಾರಿಯಾಗಿದ್ದೇವೆ.
• **ಬಂದೇನವಾಜ್ ದೊಡ್ಡಮನಿ, ನೊಂದ ರೈತ, ಬೈಚಬಾಳ ಗ್ರಾಮ**

ದೇಶದ ಬೆನ್ನೆಲುಬು ಆ ರೈತರಿಗೆ ಮೋಸ ಮಾಡಿದ್ರೆ ಒಳ್ಳೆಯದಾಗುವುದಿಲ್ಲ, ಸದ್ಯ 43 ಜನ ರೈತರಿಗೆ 71 ಲಕ್ಷ ಹಣವನ್ನು ಪ್ರಾಮಾಣಿಕವಾಗಿ ತಲುಪಿಸಿದ್ದೇವೆ, ಇನ್ನುಳಿದ ₹78 ಲಕ್ಷ ಹಣವನ್ನು ಆಂಧ್ರ ಮೂಲದ ವ್ಯಕ್ತಿಯ ಆಸ್ತಿ ಮುಟ್ಟುಗೋಲು ಮಾಡಿಕೊಂಡು, ನೊಂದ ರೈತರಿಗೆ ನೀಡುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಕೆಂಭಾವಿ ಪಿಎಸ್ಐ ಹಾಗೂ ಹಗಲಿರುಳು ಶ್ರಮಿಸಿದ ಎಲ್ಲ ಕಾಣದ ಕೈಗಳಿಗೂ ಧನ್ಯವಾದಗಳು.
• **ನರಸಿಂಹ ನಾಯಕ,** ಮಾಜಿ ಶಾಸಕ.

ಜಿಟಿಟಿಸಿ: ಪ್ರವೇಶಾತಿಗೆ ಅರ್ಜಿ

ಯಾದಗಿರಿ: ಕಡೇಚೂರು ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು, ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಕರ್ನಾಟಕ ಸರ್ಕಾರದ ಒಂದು ಅಂಗಸಂಸ್ಥೆಯಾಗಿದ್ದು, ಕೈಗಾರಿಕೆಗಳಿಗೆ ಬೇಕಾಗುವ ನುರಿತ ಮಾನವ ಸಂಪನ್ಮೂಲವನ್ನು ಒದಗಿಸುವುದರ ಜೊತೆಗೆ ಯುವ ಜನತೆಗೆ ಉದ್ಯೋಗ ಅವಕಾಶ ಕಲ್ಪಿಸುವ ತರಬೇತಿ ಕೇಂದ್ರವಾಗಿದೆ. ಅಲ್ಪಾವಧಿ, ದೀರ್ಘಾವಧಿ ತರಬೇತಿಗಳನ್ನೂ ಸಹ ನೀಡುತ್ತಿದೆ. ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಆನ್‌ಲೈನ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ಮೇ 10 ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ 155267, ಈಮೇಲ್ https://gttc.karnataka.gov.in ಅಥವಾ ಮೊಬೈಲ್ ಸಂಖ್ಯೆಗಳು 6362883923, 9742502602, 7411541438, 8106563928 ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಗ್ರಾ.ಪಂ ಸದಸ್ಯರ ಸ್ಥಾನಗಳ ಪ್ರಕಟ

ಯಾದಗಿರಿ: ವಿವಿಧ ಗ್ರಾ.ಪಂ.ಗಳ ಚುನಾಯಿತ ಸದಸ್ಯರ ಸ್ಥಾನಗಳನ್ನು ಪ್ರಕಟಿಸಲಾಗಿದ್ದು, ಕರ್ನಾಟಕ ಪಂ.ರಾಜ್ ಸೀಮಾ ನಿರ್ಣಯ ಆಯೋಗದಿಂದ ಅದಾಲತ್ ವೇಳಾಪಟ್ಟಿ ವಿಸ್ತರಿಸಿದೆ ಎಂದು ಅಪರ ಜಿಲ್ಲಾಧಿಕಾರಿ, ಅಪರ ಜಿಲ್ಲಾ ಚುನಾವಣಾಧಿಕಾರಿ ರಮೇಶ ಕೋಲಾರ ಮೂಲಕ ತಿಳಿಸಿದ್ದಾರೆ. ಗ್ರಾ.ಪಂ ಚುನಾಯಿತ ಸದಸ್ಯರ ಸ್ಥಾನಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ. ರಾಜ್ ಅಧಿನಿಯಮ ಪ್ರಕರಣ 5(1) ರಂತೆ 2026ರ ಏಪ್ರಿಲ್ 18 ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ರಾಜ್ಯ ಪತ್ರದ ವಿಳಾಸ https://erajyapatra.karnataka.gov.in ಪ್ರಕಟಿಸಿದೆ. ಈ ಸದಸ್ಯ ಸ್ಥಾನಗಳ ಪ್ರಕಟಣೆ ಕುರಿತಂತೆ ಹೊರಡಿಸಲಾದ ಕರಡು ಪ್ರಕಟಣೆಗೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ಮೇ 8ರ ಸಂಜೆ 5.30ರವರೆಗೆ ವಿಸ್ತರಿಸಿದೆ. ಆಯೋಗದ ವೆಬ್‌ಸೈಟ್ https://rdpr.karnataka.gov.in/rdc/public/ ನಲ್ಲಿ ಮತ್ತು ಖುದ್ದಾಗಿ ಅಂಚೆ ಮೂಲಕ ಗ್ರಾಮಿಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಗೇಟ್‌ನಂ.2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ ಬೆಂಗಳೂರು ಕಛೇರಿಯಲ್ಲಿ ಮಾತ್ರ ಸಲ್ಲಿಸಲು ಅವಕಾಶವಿದೆ.

ಬಿಜೆಪಿಗೆ ಅಭೂತಪೂರ್ವ ಗೆಲುವು: ಹುಣಸಗಿಯಲ್ಲಿ ವಿಜಯೋತ್ಸವ

ಬಿಜೆಪಿ ಗೆಲುವು ದೇಶದ ಜನ ಬಿಜೆಪಿ ಮೇಲಿಟ್ಟ ವಿಶ್ವಾಸ: ವೀರೇಶ ಸಾಹು ಚಿಂಚೋಳಿ ಅಭಿಮತ

• **ಕನ್ನಡಪ್ರಭ ವಾರ್ತೆ** ಹುಣಸಗಿ

ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದ ಪ್ರಯುಕ್ತ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಬಿಜೆಪಿ ಮುಖಂಡ ವಿರೇಶ ಸಾಹು ಚಿಂಚೋಳಿ ಮಾತನಾಡಿ, ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನ. ಐದು ರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಐತಿಹಾಸಿಕ ಗೆಲುವು ದಾಖಲಿಸಿದೆ. ಪಶ್ಚಿಮ ಬಂಗಾಳದ ಜನ ಬಿಜೆಪಿಗೆ ಅಭೂತಪೂರ್ವ ಗೆಲುವು ನೀಡುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ. ಮುಕ್ತ, ನ್ಯಾಯ ಸಮ್ಮತ ಚುನಾವಣೆ ಹಾಗೂ ಹಿಂದೂಗಳ ಒಗ್ಗಟ್ಟಿನ ಪ್ರಯತ್ನದ ಪ್ರತಿಫಲ ಇದಾಗಿದೆ ಎಂದು ತಿಳಿಸಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಸಂಗಣ್ಣ ಸಾಹು ವೈಲಿ ಮಾತನಾಡಿ, 3 ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ದೇಶದ ಜನ ಬಿಜೆಪಿ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಿದರ್ಶನ. ದೇಶದ್ರೋಹಿ ಹಾಗೂ ಸಮಾಜಘಾತುಕ ಚಟುವಟಿಕೆಗಳ ಕಾರಣ ಪಶ್ಚಿಮ ಬಂಗಾಳ ಸರ್ಕಾರ ದೇಶಕ್ಕೆ ಆಘಾತಕಾರಿಯಾಗಿ ಪರಿಣಮಿಸಿತ್ತು. ಜನ ವಿರೋಧಿ ಆಡಳಿತದಿಂದ ಅಲ್ಲಿಯ ಜನ ಬೇಸತ್ತಿದ್ದರು. ಟಿಎಂಸಿಯನ್ನು ಕಿತ್ತೊಗೆದಿದ್ದರಿಂದ ಈಗ ಅವರಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೇಲಪ್ಪ ಗುಳಗಿ ಮಾತನಾಡಿ, ಪ್ರಧಾನಿ ಮೋದಿ ನಾಯಕತ್ವದಲ್ಲಿ ದೇಶ ವಿಶ್ವದ ವೇದಿಕೆ ಯಲ್ಲಿ ಎತ್ತರಕ್ಕೆ ಏರುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಂಘಟನೆ ಶಕ್ತಿಯಿಂದ ಪಕ್ಷ ಇನ್ನಷ್ಟು ಬಲಿಷ್ಠವಾಗಿದೆ. ಈ ಗೆಲುವು ಕೇವಲ ರಾಜಕೀಯ ಜಯ ವಲ್ಲ, ಇದು ಜನರ ವಿಶ್ವಾಸದ ಪ್ರತಿಫಲ. ಜನರು ಅಭಿವೃದ್ಧಿ, ಸುವ್ಯವಸ್ಥೆ ಮತ್ತು ಉತ್ತಮ ಆಡಳಿತವನ್ನು ಬೆಂಬಲಿಸಿದ್ದಾರೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ ಎಂದರು. ಅಮರಣ್ಣ ದೇಸಾಯಿ, ಕಿಡಗೆಣ್ಣಯ್ಯ ದೇಸಾಯಿ ಗುರು, ವಿರು ಪಾಕ್ಷಯ್ಯ ಸ್ಥಾವರಮಠ, ಮಲ್ಲು ಹೆಬ್ಬಾಳ, ನಾಗಯ್ಯ ಸ್ವಾಮಿ ದೇಸಾಯಿ ಗುರು, ಗುರಲಿಂಗಣ್ಣ ಸಜ್ಜನ್, ಆನಂದ ಮುತ್ಯಾ ಹಿರೇಮಠ, ಚಂದ್ರಶೇಖರ್‌ಪಟ್ಟಣಶೆಟ್ಟಿ, ಹಳ್ಳೆಪ್ಪ ಗುತ್ತೇದಾರ, ಮಲ್ಲಿಕಾರ್ಜುನ ದೇಸಾಯಿ, ಅನೀಲ್ ಬಳಿ, ಶಿವರುದ್ರ ದೇಸಾಯಿ, ಆನಂದ ಬಾರಿಗಿಡ, ಗೋಪಾಲ ಹುಲಿಮನಿ, ಸಿದ್ದು ಮೇಲಿನಮನಿ, ಬಾಬು ರಾಠೋಡ, ಅಶೋಕ ನಗನೂರ, ಮಲ್ಲು ದೇಸಾಯಿ ಇದ್ದರು.


ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭಾರಿ ಗೆಲುವು ಸಾಧಿಸಿದ ಪ್ರಯುಕ್ತ ಬಿಜೆಪಿ ಮುಖಂಡರು, ಕಾರ್ಯಕರ್ತರು ಹುಣಸಗಿ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ತೆರಿಗೆ ಹೆಚ್ಚಳಕ್ಕೆ ಮನವಿ ಪತ್ರ

ಚಿಂಚೋಳಿ: ಕಲಬುರಗಿ ಸಿಮೆಂಟ ಕಂಪನಿಯ ಆಸ್ತಿ ತೆರಿಗೆಯನ್ನು ಹೆಚ್ಚಿಸಬೇಕೆಂದು ಕರ್ಚಖೇಡ ಗ್ರಾಪಂ ಸದಸ್ಯ ಸಲೀಮಪಾಶಾ ಸಾತಬಾಯಿ ಅವರು ಜಿಪಂ ಸಿಇಒ ಭಂವರಸಿಂಗ್ ಮೀನಾ ಅವರಿಗೆ ಮನವಿ ಪತ್ರ ಸಲ್ಲಿಸಿದರು.